


ಇನ್ನು ಕೆಲವರು ಕೊನೆಯಿಲ್ಲದ ಗಲ್ಲಿಗಳಾದರು
ನೀವು ಮೆಟ್ಟುವ, ನೀವು ಹುಡುಕುವ
('ಅವರು' – ಮುಖಾಮುಖಿ, 1978)

ಹಾಗೆಂದು, ತಿರುಮಲೇಶ್ ಈ ಕ್ರಮ ಬಳಸಿದಲ್ಲೆಲ್ಲ ಯಶಸ್ವಿ ಆಗಿದ್ದಾರೆ ಎಂದಲ್ಲ. 'ಹಿಟ್ ಅಂಡ್ ಮಿಸ್' ಅನ್ನುವಂತೆ, 'ಇಲಿಗಳನ್ನು ಕೊಲ್ಲುವುದು' ಎಂಬಂತಹ ಕವಿತೆಗಳಲ್ಲಿ ಕಾಣ್ಕೆಯನ್ನು ಒದಗಿಸುವ ಸಾಲು ಸಿಗದೇ ಇಡೀ ಕವನ ಠುಸ್ಸಾಗುವುದೂ ಇದೆ.

ತಿರುಮಲೇಶರ ಕಾವ್ಯ ರಚನೆಯ ಮತ್ತೊಂದು ಕ್ರಮವೆಂದರೆ, ಕನ್ನಡ ಒದಗಿಸುವ ಬಗೆಬಗೆಯ ಪ್ರಾಸಸಾಧ್ಯತೆಗಳನ್ನು– ಅಂತ್ಯಪ್ರಾಸ, ಒಳಪ್ರಾಸ, ಆಸುಪಾಸುಪ್ರಾಸ– ಅಥವಾ ಪದನಾದ, ಲಯಗಾರಿಕೆಗಳನ್ನು ಬಳಸಿಕೊಂಡು ಕವಿತೆ ಕಟ್ಟುತ್ತ ಹೋಗುವುದು. 'ಕುಂಬಳೆ ಕೋಟೆ', 'ಒಂದು ಗ್ರಾಮದ ಮುಖಗಳು', 'ಯಾವುದಿಲ್ಲ ಯಾವುದುಂಟು' ಕವಿತೆಗಳಲ್ಲಿ ಈ ಕ್ರಮವನ್ನು ಕಾಣಬಹುದು.

ಕಾರಡ್ಕ ಮುಳ್ಳೆರಿಯ ಕಾನತ್ತೂರು ಕರಣಿ
ವಿಚಿತ್ರ ಹೆಸರುಗಳ ಸರಣಿ
ಹೊತ್ತ ಈ ಧರಣಿ ನಮ್ಮ ಪಡೆದಾಗ
ಇನ್ನೂ ತರುಣಿ
('ಒಂದು ಗ್ರಾಮದ ಮುಖಗಳು' – ಅವಧ, 1986)

ಇಂತಹುದೇ ಇನ್ನೊಂದು ಕ್ರಮವೆಂದರೆ